# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸಿದ್ದಾಪುರ

**ಸಿ ಸಿ ನಂ. 107/2024**

| ಫಿರ್ಯಾದುದಾರರು | ವಿರುದ್ಧ | ಆರೋಪಿತರು |
|---|---|---|
| ಸಿದ್ದಾಪುರ ಪೊಲೀಸ್ ಠಾಣೆ. | | 1. ಮುರುಳಿ ತಂದೆ ಸೋಮಣ್ಣ ನಾಯರ್ ಪ್ರಾಯಃ 45 ವರ್ಷ, ಉಃ ಕೂಲಿ ಕೆಲಸ,<br>2. ಶ್ರೀಮತಿ ಶೋಭಾ ಕೋಂ ಮುರುಳಿ ನಾಯರ್ ಪ್ರಾಯಃ 39 ವರ್ಷ, ಉಃ ಗೃಹಿಣಿ ,<br>3. ಹರಿಪ್ರಸಾದ ತಂದೆ ಸೋಮಣ್ಣ ನಾಯರ್ ಪ್ರಾಯಃ 38 ವರ್ಷ, ವೃತ್ತಿಃ ಚಾಲಕ ,<br>4. ಶ್ರೀಮತಿ ನೇತ್ರಾವತಿ ಕೋಂ ಹರಿಪ್ರಸಾದ ನಾಯರ್ ಪ್ರಾಯಃ 30 ವರ್ಷ,<br>ಆ 1 ರಿಂದ 4 ರವರ ವಾಸಃ ಮಂಡ್ಲಿಕೊಪ್ಪ , ಸಿದ್ದಾಪುರ ತಾಲೂಕು<br>5. ಶ್ರೀಮತಿ ನೇತ್ರಾವತಿ ಕೆ ಸುರೇಶ ಪ್ರಾಯಃ 39 ವರ್ಷ, ಉಃಗೃಹಿಣಿ<br>ವಾಸಃ ಉದ್ಯಮನಗರ , ಯಲ್ಲಾಪುರ<br>6. ಅಶೋಕ ತಂದೆ ರಾಮಣ್ಣ ನಾಯರ್ ಪ್ರಾಯ 48 ವರ್ಷ, ಉಃ ಆಚಾರಿ ಕೆಲಸ, ವಾಸಃ ಶಿವಪ್ಪ ನಾಯಕ ನಗರ, ಎಸ್ ಎನ್ ನಗರ ಸಾಗರ ತಾಲೂಕು , ಸಾಗರ, ಶಿವಮೊಗ್ಗ ಜಿಲ್ಲೆ |

## ಃ ದೋಷಾರೋಪಣೆ ಃ

ಶ್ರೀ. ಭರತ ಚಂದ್ರ ಕೆ ಎಸ್ . ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿದ್ದಾಪುರ ಆದ ನಾನು ಈ ಮೂಲಕ ನಿಮ್ಮ ಮೇಲೆ ಹೊರಿಸಿದ ದೋಷಾರೋಪಣೆ ಏನೆಂದರೆ,

ಸಿದ್ದಾಪುರ ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಸಿದ್ದಾಪುರ ತಾಲೂಕಿನ ಮಂಡ್ಲಿಕೊಪ್ಪ ಗ್ರಾಮದ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಪಿರ್ಯಾದಿಯ ಮನೆಯ ಮುಂಭಾಗದಲ್ಲಿ, ದಿಃ 29-12-2023 ರಂದು ರಾತ್ರಿ 10-45 ಗಂಟೆ ಸುಮಾರಿಗೆ ಪಿರ್ಯಾದಿಯು 1 ನೇ ಆರೋಪಿತನಾದ ನಿನ್ನ ಬಳಿ ಬಂದು ನಿನಗೆ ಹೆಂಗಸರು ಮತ್ತು ಮಕ್ಕಳ ಹತ್ತಿರ ಹೇಗೆ ಮಾತನಾಡಬೇಕು ಎಂದು ಗೊತ್ತಿಲ್ಲಾ , ಜಗಳ ಮಾಡದೇ ಸಮಾಧಾನದಿಂದ ಹೇಳಬಹುದಿತ್ತಲ್ಲಾ? ಯಾಕೆ ಸುಮ್ಮನೆ ನನ್ನ ಹೆಂಡತಿ ಮಕ್ಕಳ ಮೇಲೆ ಜಗಳಕ್ಕೆ

ಬರುತ್ತೀಯಾ ? ಎಂದು ಕೇಳಿದಾಗ ಅಲ್ಲಿಯೇ ಇದ್ದ ಆರೋಪಿತರೆಲ್ಲರೂ ಗುಂಪುಕಟ್ಟಿಕೊಂಡು ಪಿರ್ಯಾದಿ ಮೇಲೆ ಎರಗಿ ಬಂದು ಪಿರ್ಯಾದಿಯನ್ನು ಉದ್ದೇಶಿಸಿ, ನಿನ್ನ ಹೆಂಡತಿ ಮಕ್ಕಳನ್ನು ಊರ ಮೇಲೆ ಸೂಳೆಗಾರಿಕೆ ಮಾಡಲು ಬಿಟ್ಟು , ಹೊರಗಡೆ ಇದ್ದವನು ಈಗ ಕೇಳಲು ಬಂದಿದ್ದೀಯಾ? ಸೂಳೆ ಮಗನೇ , ಬೋಳಿಮಗನೇ ನಿನ್ನ ಹೆಂಡತಿ ಮಕ್ಕಳನ್ನು ಸರಿಯಾಗಿ ಇಟ್ಟುಕೋ ಎಂದು ಅವಾಚ್ಯವಾಗಿ ಬೈದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದೀರೆಂದು ದೋಷಾರೋಪಿಸಲಾಗಿದೆ.

ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವು ಪಿರ್ಯಾದಿಯನ್ನು ಕೈಯಿಂದ ಹೊಡೆದಿದ್ದು , ಆ ಮುಾಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದೀರೆಂದು ದೋಷಾರೋಪಿಸಲಾಗಿದೆ.

ಮುಾರನೇಯದಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 3 ನೇ ಅರೋಪಿತನಾದ ನೀನು ಸಮಾನ ಉದ್ದೇಶದಿಂದ ಪಿರ್ಯಾದಿಯನ್ನು ಅಲ್ಲಿಯೇ ಇದ್ದ ಕಾಡುಜಾತಿಯ ಬಡಿಗೆಯಿಂದ ಪಿರ್ಯಾದಿಯ ತಲೆಗೆ ಹೊಡೆದು ಸಾದಾ ಸ್ವರೂಪದ ಗಾಯನೋವುಂಟುಪಡಿಸುವುದರ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದೀರೆಂದು ದೋಷಾರೋಪಿಸಲಾಗಿದೆ.

ನಾಲ್ಕನೇಯದಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವು ಪಿರ್ಯಾದಿಯನ್ನು ಉದ್ದೇಶಿಸಿ, ಈ ದಿವಸ ಉಳಿದುಕೊಂಡಿದ್ದೀಯಾ ಇನ್ನೊಂದು ಸಲ ನಮ್ಮ ಸುದ್ದಿಗೆ ಬಂದರೆ ನಿನಗೆ ಮತ್ತು ನಿನ್ನ ಹೆಂಡತಿ ಮಕ್ಕಳನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆಯನ್ನು ಒಡ್ಡಿದ್ದು , ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದೀರಿ ಎಂದು ಆಪಾದಿಸಲಾಗಿದೆ.

ಪ್ರಶ್ನೆಃ ಈ ಮೇಲೆ ಓದಿ ಹೇಳಲಾದ ದೋಷಾರೋಪಣೆಯು ನಿಮಗೆ ತಿಳಿಯಿತೇ?

ಉತ್ತರಃ 1 ನೇ ಆರೋಪಿಃ

2 ನೇ ಆರೋಪಿಃ

3 ನೇ ಆರೋಪಿಃ

5 ನೇ ಆರೋಪಿಃ

6 ನೇ ಆರೋಪಿಃ

ಪ್ರಶ್ನೆಃ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ವಿಚಾರಣೆ ಬಯಸುವಿರೋ?

ಉತ್ತರಃ 1 ನೇ ಆರೋಪಿಃ

2 ನೇ ಆರೋಪಿಃ

3 ನೇ ಆರೋಪಿಃ

5 ನೇ ಆರೋಪಿಃ

6 ನೇ ಆರೋಪಿಃ

(ಮೇಲಿನ ದೋಷಾರೋಪಣೆಯನ್ನು ಆರೋಪಿಗಳಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಗಿ ಅವರು ಕೊಟ್ಟ ಉತ್ತರವನ್ನು ಅದೇ ರೀತಿ ದಾಖಲಿಸಿಕೊಳ್ಳಲಾಯಿತು ).

ದಿನಾಂಕಃ *20-06-2024*

ಪ್ರ.ದ.ನ್ಯಾ. ದಂಡಾಧಿಕಾರಿ,
ಸಿದ್ದಾಪುರ .